159೭೬6
43

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಲ್.ಎಲ್ ಭೋಜೇಗೌಡ) ಇವರು ನಿಯಮ 72 ರಡಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:**

**"ಕರ್ನಾಟಕ ಗಾಲ್ಫ್ ಅಸೋಸಿಯೇಷನ್ (ಕೆಜಿಎ)ಗೆ ಸಂಬಂಧಿಸಿದಂತೆ ದಿನಾಂಕ:21.08.1980 ರಿಂದ ಈವರೆಗೂ ಹಲವಾರು ಬಾರಿ ಪರಸ್ಪರ ಗುತ್ತಿಗೆ ಒಪ್ಪಂದದ ಷರತ್ತುಗಳನ್ನು ಪ್ರಸ್ತಾಪಿಸಿ, ಸರ್ಕಾರದಿಂದ ಸಮಿತಿಗಳನ್ನು ರಚಿಸಿ ಗುತ್ತಿಗೆ ಬಾಡಿಗೆಯನ್ನು ನಿಗಧಿಪಡಿಸಲು ಶಿಫಾರಸ್ಸು ಮಾಡಿದ್ದರೂ ಸಹ ಸರ್ಕಾರವು ಯಾವುದೇ ಕ್ರಮವನ್ನು ಕೈಗೊಳ್ಳದೇ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಗಮನ ಸೆಳೆದಿರುವ ಕುರಿತು.**

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ: ಹೆಚ್. 38 ಟಿಟಿಟಿ 1980, ದಿನಾಂಕ:17.05.1980. ರಂತೆ, ಚಲ್ಲಘಟ್ಟ ತಾಲ್ಲೂಕು ಬೆಂಗಳೂರು ಪೂರ್ವ ಇದರ ಸರ್ವೆ ನಂ:16 ಕ್ಷೇತ್ರ 112 ಎಕರೆ ಮತ್ತು ಕೋಡಿಹಳ್ಳಿ ಗ್ರಾಮ ಬೆಂಗಳೂರು ಪೂರ್ವ ತಾಲ್ಲೂಕು ಇದರ ಸರ್ವೆ ನಂ:145 ಕ್ಷೇತ್ರ 12 ಎಕರೆ ಒಟ್ಟು 124 ಎಕರೆ ಜಮೀನನ್ನು ಕರ್ನಾಟಕ ಗಾಲ್ಫ್ ಅಸೋಸಿಯೇಷನ್ಸ್ ಸಂಸ್ಥೆಗೆ 30 ವರ್ಷಗಳ ಅವಧಿಗೆ ಪ್ರತಿ ಎಕರೆ ರೂ. 01 ರಂತೆ ಗುತ್ತಿಗೆ ಮೊತ್ತವನ್ನು ನಿಗದಿಪಡಿಸಿ ದಿನಾಂಕ:25.07.1986 ರಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಗಾಲ್ಫ್ ಅಸೋಸಿಯೇಷನ್ಸ್ ನಡುವೆ ಲೀಸ್ ಒಪ್ಪಂದ ಏರ್ಪಟ್ಟಿರುತ್ತದೆ.

ನಂತರದಲ್ಲಿ ಸದರಿ ಲೀಸ್ ಒಪ್ಪಂದವು 2010ಕ್ಕೆ ಮುಕ್ತಾಯಗೊಂಡ ಹಿನ್ನಲೆಯಲ್ಲಿ ಸದರಿ ಲೀಸ್ ಕರಾರುನ್ನು ಸರ್ಕಾರಿ ಆದೇಶ ಸಂಖ್ಯೆ:ಕೆ.ಡಿ. 68 ಟಿಟಿಸಿ 2009, ದಿನಾಂಕ:24.10.2013 ಮತ್ತು ಸರ್ಕಾರದ ಆದೇಶ ಸಂಖ್ಯೆ:41 ಎಲ್.ಜಿ.ಬಿ. 2014, ದಿನಾಂಕ:05.03.2018 ದಿನಾಂಕ:13.06.2012ರ ಸಚಿವ ಸಂಪುಟದ ನಿರ್ಣಯದ ಮೇರೆ ಸದರಿ ಸಂಸ್ಥೆಯ ಆದಾಯದಲ್ಲಿ ಶೇ 2% ರಷ್ಟು ಮೊತ್ತವನ್ನು ಲೀಸ ಮೊತ್ತವಾಗಿ ನಿಗದಿಪಡಿಸಿ ದಿನಾಂಕ:17.05.2010 ರಿಂದ ಅನ್ವಯವಾಗುವಂತೆ ದಿನಾಂಕ:19.05.2018 ರಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಗಾಲ್ಫ್ ಅಸೋಸಿಯೇಷನ್ಸ್ ನಡುವೆ ಲೀಸ್ ಒಪ್ಪಂದ ಏರ್ಪಟ್ಟಿರುತ್ತದೆ.

ಪ್ರಸ್ತುತ ಕರ್ನಾಟಕ ಗಾಲ್ಫ್ ಅಸೋಸಿಯೇಷನ್ಸ್ (ಗಾಲ್ಫ್ ಕ್ಲಬ್) ನಿಂದ ಸರ್ಕಾರಕ್ಕೆ ಕ್ಲಬ್‌ನ ವಾರ್ಷಿಕ ಆದಾಯದ 2% ಗುತ್ತಿಗೆ ಬಾಡಿಗೆ ಮೊತ್ತವನ್ನು 2013 ನೇ ಸಾಲಿನಲ್ಲಿ ಸಚಿವ ಸಂಪುಟದ ನಿರ್ಣಯದಂತೆ ಸರ್ಕಾರದ ಆದೇಶ ಸಂಖ್ಯೆ:ಕೆ.ಡಿ. 68 ಟಿಟಿಸಿ 2009, ದಿನಾಂಕ:24.10.2013ರಲ್ಲಿ ನಿಗದಿಪಡಿಸಲಾಗಿರುತ್ತದೆ. ಕರ್ನಾಟಕ ಗಾಲ್ಫ್ ಅಸೋಸಿಯೇಷನ್ಸ್ ಆದಾಯವನ್ನು ಲೆಕ್ಕ ಪರಿಶೋಧಕರಿಂದ ಪರಿಶೀಲಿಸಿ, ವರದಿಯನ್ನು ನೀಡುವಂತೆ ಸಂಘಗಳ ಜಿಲ್ಲಾ ನೊಂದಣಾಧಿಕಾರಿಯವರಗೆ ಸೂಚಿಸಲಾಗಿದ್ದು, ಸದರಿಯವರಿಂದ ವರದಿ ಸ್ವೀಕೃತವಾದ ನಂತರ ಗುತ್ತಿಗೆ ಮೊತ್ತದ ಪರಿಷ್ಕರಣೆಯ ಕುರಿತು ಸಚಿವ ಸಂಪುಟಕ್ಕೆ ಕಾರ್ಯಸೂಚಿಯನ್ನು ಸಲ್ಲಿಸಿ, ಸಚಿವ ಸಂಪುಟದ ನಿರ್ಣಯದ ನಂತರ ಪ್ರಸ್ತುತ ಚಾಲ್ತಿಯಲ್ಲಿರುವ ಕರಾರಿನಲ್ಲಿ ಬಾಡಿಗೆ ಮೊತ್ತಕ್ಕೆ ಸಂಬಂದಿಸಿದಂತೆ ತಿದ್ದುಪಡಿ ಮಾಡಿಕೊಳ್ಳುವ ಕುರಿತು ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ: ಟಿಓಆರ್ 180 ಟಿಡಿವಿ 2026**

**(ಕೆ.ಜೆ. ಜಾರ್ಜ್)**
ಇಂಧನ ಹಾಗೂ ಪ್ರವಾಸೋದ್ಯಮ ಸಚಿವರು